/

# ಉಪತಹಶೀಲ್ದಾರರವರ ನ್ಯಾಯಾಲಯ ನಾಡ ಕಛೇರಿ ಹೊಸಹಳ್ಳಿ

ಸಂ/ಕಂ/ಹ.ಬ./ನಾ.ಕ.ಹೊ/112/2015-16 ದಿನಾಂಕ:25-04-2016

| ಅರ್ಜಿದಾರರು | ತಕರಾರುದಾರರು |
|---|---|
| 1)ಎಂ.ಡಿ.ದೀಪು ತಂದೆ ದೊಡ್ಡೆಗೌಡ<br>ಮಹಾದೇವರಹಳ್ಳಿ ಗ್ರಾಮ<br>ಅರಸೀಕೇರಿ ತಾಲೂಕು<br>ಹಾಸನ ಜಿಲ್ಲಾ<br>2)ಅಡಗಿ ಬಸಪ್ಪ ತಂದೆ ದೊಡ್ಡಬಸಪ್ಪ<br>ರಂಗನಾಥಹಳ್ಳಿ ಗ್ರಾಮ<br>ಕೂಡ್ಲಿಗಿ ತಾಲೂಕು | ವೀರಭದ್ರಪ್ಪ ತಂದೆ ವೈ.ತಿಪ್ಪಯ್ಯ<br>ಹಿರೇಕುಂಬಳಕುಂಟೆ ಗ್ರಾಮ<br>ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ರಂಗನಾಥಹಳ್ಳಿ ಗ್ರಾಮದ ಸನಂ 65/3ಪೈಕಿ ವಿಸ್ತೀರ್ಣ 1-00 ಎಕ್ರೆ ಜಮೀನನ್ನು ಕ್ರಯ ಪತ್ರ ಪ್ರಕಾರ ಹಕ್ಕು ಬದಲಾವಣೆ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ರಂಗನಾಥಹಳ್ಳಿ ಗ್ರಾಮದ ಸನಂ 65/3ಪೈಕಿ ವಿಸ್ತೀರ್ಣ 1-00 ಎಕ್ರೆ ಜಮೀನನ್ನು ಸದರಿ ತಾಲೂಕು ಸದರಿ ಗ್ರಾಮದ ಅಡಗಿ ಬಸಪ್ಪ ತಂದೆ ದೊಡ್ಡಬಸಪ್ಪ ಇವರಿಂದ ಹಾಸನ ಜಿಲ್ಲಾ ಅರಸೀಕೇರಿ ತಾಲೂಕು ಮಹಾದೇವರಹಳ್ಳಿ ಗ್ರಾಮದ ಎಂ.ಡಿ.ದೀಪು ತಂದೆ ದೊಡ್ಡೆಗೌಡ ಇವರು ದಿನಾಂಕ 30-01-2015 ರ ಡಾಕ್ಯುಮೆಂಟ್ ನಂಬರ್: 3764/2014-15 ರ ಪ್ರಕಾರ ಖರೀದಿಸಿ ಕೂಡ್ಲಿಗಿಯ ಉಪನೊಂದಣಾದಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಂಡಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ರಂಗನಾಥಹಳ್ಳಿ ಇವರು ನಮೂನೆ-21 ರ ನೋಟಿಸನ್ನು ದಿನಾಂಕ: 01-01-2016 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ತಾಲೂಕು ಹಿರೇಕುಂಬಳಕುಂಟೆ ಗ್ರಾಮದ ವೀರಭದ್ರಪ್ಪ ತಂದೆ ವೈ ತಿಪ್ಪಯ್ಯ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣದ ಎಂ.ಆರ್ ನಂ: 03/2015-16. ದಿನಾಂಕ: 03-03-2015 ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದೆಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸು ನೀಡಿ ದಿನಾಂಕ 05-04-2016 ರಿಂದ 25-04-2016 ರ ವರೆಗೆ ವಿಚಾರಣೆ ಮಾಡಲಾಯಿತು

ವಿಚಾರಣೆಯ ಸಮಯದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಗೈರು ಹಾಜರಾಗಿರುತ್ತಾರೆ. ಅರ್ಜಿದಾರರು ರಂಗನಾಥಹಳ್ಳಿ ಗ್ರಾಮದ ಸನಂ 65/3ಪೈಕಿ ವಿಸ್ತೀರ್ಣ 1-00 ಎಕ್ರೆ ಜಮೀನನ್ನು ಸದರಿ ಗ್ರಾಮದ ಅಡಗಿ ಬಸಪ್ಪ ತಂದೆ ದೊಡ್ಡಬಸಪ್ಪ ಇವರಿಂದ ದಿನಾಂಕ 30-01-2015 ರ ಡಾಕ್ಯುಮೆಂಟ್ ನಂಬರ್: 3764/2014-15. ರ ಪ್ರಕಾರ ರೂ:1.00.000/- ಗಳಿಗೆ ಖಂಡಿತ ಕ್ರಯಕ್ಕೆ ಖರೀದಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿಕೊಂಡಿರುವುದು ಕಂಡು ಬರುತ್ತದೆ.

ವಿಚಾರಣೆಯಲ್ಲಿ ತಕರಾರುದಾರರ ಗೈರು ಹಾಜರಾಗಿರುತ್ತಾರೆ. ಸದರಿ ವಿವಾದಿತ ಜಮೀನಿನ ಬಗ್ಗೆ ತಕರಾರುದಾರರು ತಕರಾರು ಅರ್ಜಿ ಮಾತ್ರ ಸಲ್ಲಿಸಿದ್ದು ವಿಚಾರಣೆಗೆ ಹಾಜರಾಗಿ ತಮ್ಮ ತಕರಾರು ಬಗ್ಗೆ ಯಾವುದೇ ಹೇಳಿಕೆಗಳನ್ನಾಗಲಿ ದಾಖಲೆಗಳನ್ನಾಗಲಿ ಸಲ್ಲಿಸಿರುವುದಿಲ್ಲ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರು ಮತ್ತು ತಕರಾರುದಾರರು ಗೈರು ಹಾಜರಾಗಿರುತ್ತಾರೆ. ಕಂದಾಯ ನ್ಯಾಯಲಯದಲ್ಲಿ ನೊಂದಾಯಿತ ಕ್ರಯ ಪತ್ರ ರದ್ದು ಪಡಿಸುವ ಅಧಿಕಾರ ಇಲ್ಲದಿರುವುದರಿಂದ ಸದರಿ ಕ್ರಯ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

**–:ಆದೇಶ:–**

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಸ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ರಂಗನಾಥಹಳ್ಳಿ ಗ್ರಾಮದ ಸನಂ 65/3ಪೈಕಿವಿಸ್ತೀರ್ಣ 1–00 ಎಕ್ರೆ ಜಮೀನನ್ನು ದಿನಾಂಕ 30–01–2015 ರ ಡಾಕ್ಯುಮೆಂಟ್ ನಂಬರ್: 3764/2014–15 ರ ಕ್ರಯ ದಸ್ತಾವೇಜು ಪ್ರಕಾರ ಅರ್ಜಿದಾರರಾದ ಹಾಗೂ ಕ್ರಯದಾರರಾದ ಎಂ.ಡಿ.ದೀಪು ತಂದೆ ದೊಡ್ಡಗೌಡ ಮಹಾದೇವರಹಳ್ಳಿ ಗ್ರಾಮ ಇವರ ಹೆಸರಲ್ಲಿ ಹಕ್ಕ ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ: 25–04–2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

SRDesai

ಉಪತಹಶೀಲ್ದಾರರು
ನಾಡಕಛೇರಿ ಹೊಸಹಳ್ಳಿ
ಹೊಸಹಳ್ಳಿ

114

ಇದರ ಪ್ರತಿಯನ್ನು:

1) ಅರ್ಜಿದಾರರಾದ ಎಂ.ಡಿ.ದೀಪು ತಂದೆ ದೊಡ್ಡಗೌಡ ಮಹಾದೇವರಹಳ್ಳಿ ಗ್ರಾಮ ಅರಸೀಕೇರಿ ತಾಲೂಕು ಹಾಸನ ಜಿಲ್ಲಾ ಅಡಗಿ ಬಸಪ್ಪ ತಂದೆ ದೊಡ್ಡ ಬಸಪ್ಪ ರಂಗನಾಥಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ವೀರಭದ್ರಪ್ಪ ತಂದೆ ವೈತಿಪ್ಪಯ್ಯ ಹಿರೇಕುಂಬಳಕುಂಟೆ ಗ್ರಾಮ ಇವರಿಗೆ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕೆ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.